2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 198/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸಚಿನ್ | ಪಿಡಬ್ಲೂ - 6 |
| ತಂದೆಯ ಹೆಸರು | - | ಮಹೇಶ್ | ಸಿಡಬ್ಲೂ -9 |
| ವಯಸ್ಸು | - | 28 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಇಂದಾವರ | |

ದಿನಾಂಕಃ 11.04.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಈ ದಿನ ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರುಪಡಿಸಿರುವ ಆರೋಪಿ ಗೊತ್ತು. ಆತನ ಹೆಸರು ದುಷ್ಯಂತ್, ಆತ ನಮ್ಮ ಊರಾದ ಇಂದಾವರ ಗ್ರಾಮದ ವಾಸಿ. ಫ್ರಾಸಾ.1 ಗೊತ್ತು, ಆತ ಆರೋಪಿಯ ತಮ್ಮ. ಮೃತ ಸುಧಾ ಗೊತ್ತು, ಆಕೆ ಆರೋಪಿ ಮತ್ತು ಫ್ರಾಸಾ.1 ರವರ ತಾಯಿ. ಫ್ರಾಸಾ.3 ನನ್ನ ಸಂಬಂಧಿ. ಫ್ರಾಸಾ.4, ಚಾಸಾ.5, ಚಾಸಾ.6, ಫ್ರಾಸಾ.5, ಚಾಸಾ.8 ರವರು ಗೊತ್ತು.

2. ಮೃತ ಸುಧಾರವರ ಗಂಡನ ಹೆಸರು ಮಂಜುನಾಥ. ಅವರು ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಅವರು ಬದುಕಿದ್ದ ಸಮಯದಲ್ಲಿ ತಮ್ಮ ಹೆಂಡತಿ ಮತ್ತು ಮಕ್ಕಳೊಂದಿಗೆ ಇಂದಾವರ ಗ್ರಾಮದಲ್ಲಿ ವಾಸವಾಗಿದ್ದರು. ಮಂಜುನಾಥ್ ರವರು ತೀರಿಕೊಂಡ ಬಳಿಕ ಸುಧಾ ಮತ್ತು ಅವರ ಇಬ್ಬರು ಮಕ್ಕಳು ಚಿಕ್ಕಮಗಳೂರಿಗೆ ಬಂದು ಇಲ್ಲಿಯೇ ವಾಸವಾಗಿದ್ದರು. ಫ್ರಾಸಾ.1 ರವರು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದನು. ಆರೋಪಿ ಯಾವುದೇ ಕೆಲಸಕ್ಕೆ ಹೋಗದೇ ಮನೆಯಲ್ಲಿ ಇದ್ದನು. ಆತನನ್ನು

ಸುಧಾರವರೇ ನೋಡಿಕೊಳ್ಳುತ್ತಿದ್ದರು. ಸುಧಾ ದಿನಸಿ ಅಂಗಡಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದರು.

3. ದಿನಾಂಕ 23.09.2021 ರಂದು ಸುಧಾರವರು ಮೃತಪಟ್ಟಿದ್ದಾರೆ. ಆಕೆಯನ್ನು ಆಕೆಯ ಮಗನಾದ ಆರೋಪಿ ಗೌರಿಕಾಲುವೆಯಲ್ಲಿರುವ ಅವರ ಮನೆಯಲ್ಲಿ ಕೊಲೆ ಮಾಡಿದ್ದನು. ಆ ದಿನ ನಾನು ಇಂದಾವರ ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿ ಇದ್ದೆನು. ಆಗ ಸಂಜೆ ಸಂದೀಪ್ ರವರಿಂದ ನನಗೆ ಸುಧಾರವರನ್ನು ಆಕೆಯ ಮಗನಾದ ದುಷ್ಯಂತ್ ಕೊಲೆ ಮಾಡಿರುವ ಬಗ್ಗೆ ತಿಳಿಯಿತು ಮತ್ತು ಸುಧಾಳ ಮೃತದೇಹವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿರುವುದಾಗಿ ತಿಳಿಯಿತು. ದಿನಾಂಕ 24.09.2021 ರಂದು ನಾನು ಮತ್ತು ಸಂದೀಪ್ ಸದರಿ ಆಸ್ಪತ್ರೆಯ ಶವಾಗಾರಕ್ಕೆ ಹೋದೆವು. ಅಲ್ಲಿ ಫ್ರಾಸಾ.1 ಸಂತೋಷ್, ಸುಭಾಷ್, ಯತೀಶ್ ಮತ್ತು ರಾಜು ರವರು ಇದ್ದರು. ನಾನು ಫ್ರಾಸಾ.1 ರವರನ್ನು ಕುರಿತು ಘಟನೆಯ ಬಗ್ಗೆ ವಿಚಾರಿಸಿದೆನು. ಆಗ ಅವರು ಹಿಂದಿನ ದಿನ ಅಂದರೆ ದಿನಾಂಕ 23.09.2021 ರಂದು ಸುಧಾ, ಫ್ರಾಸಾ.1 ಮತ್ತು ಆರೋಪಿ ರವರು ದೇವಸ್ಥಾನಕ್ಕೆ ಹೋಗಿ ಬೆಳಿಗ್ಗೆ 11.30 ಗಂಟೆಗೆ ವಾಪಾಸ್ಸು ಮನೆಗೆ ಬಂದಿದ್ದಾಗಿ ಆಗ ಫ್ರಾಸಾ.1 ರವರ ಸ್ನೇಹಿತ ಸಂಜಯ್ ಆತ ವಾಸವಿದ್ದ ಪಿಜಿಯ ಮೇಡಮ್ ಗೆ ಹುಷಾರಿಲ್ಲವೆಂದು ಹೇಳಿ ಫ್ರಾಸಾ.1 ರವರನ್ನು ಕರೆದುಕೊಂಡು ಸದರಿ ಸಂಜಯ್ ಅವರನ್ನು ಹೋಲಿಕ್ರಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವಾಪಾಸ್ಸು ಸಂಜೆ 5.00 ಗಂಟೆಗೆ ಫ್ರಾಸಾ.1 ರವರು ಮನೆಗೆ ಹೋದಾಗ ಆರೋಪಿ ಮನೆಯಲ್ಲಿ ಇದ್ದುದ್ದಾಗಿ ಮತ್ತು ಆತನಿಗೆ ಸುಧಾರವರು ಸಿಗರೇಟ್ ಸೇದಲು

ದುಡ್ಡನ್ನು ಕೊಡದಿದ್ದ ಕಾರಣ ಸುಧಾರವರ ಕಾಲನ್ನು ಜಜ್ಜಿ ಕಿವಿಯನ್ನು ಹರಿದು ವಿಕೃತವಾಗಿ ಕೊಲೆ ಮಾಡಿದ್ದಾಗಿ ಫ್ರಾಸಾ.1 ರವರು ತಿಳಿಸಿದರು. ಆ ರೀತಿ ಹಣವನ್ನು ಕೊಡದ ವಿಚಾರಕ್ಕೆ ಸುಧಾರವರನ್ನು ತಾನೇ ಕೊಲೆ ಮಾಡಿದ್ದಾಗಿ ಆರೋಪಿಯೇ ಫ್ರಾಸಾ.1 ರವರಿಗೆ ತಿಳಿಸಿದ್ದಾಗಿ ಫ್ರಾಸಾ.1 ರವರು ನನಗೆ ತಿಳಿಸಿದರು.

4. ಬಸವನಹಳ್ಳಿ ಪೊಲೀಸರು ಶವಾಗಾರದ ಬಳಿ ಬಂದಿದ್ದರು. ಆಗ ಅವರು ನನ್ನನ್ನು ವಿಚಾರಿಸಿದರು. ನಾನು ಅವರಿಗೆ ಮೇಲಿನ ವಿಷಯಗಳನ್ನು ತಿಳಿಸಿದ್ದೇನೆ. ಶವಾಗಾರದಲ್ಲಿ ಇರಿಸಿದ್ದ ಸುಧಾರವರ ಶವವನ್ನು ನಾನು ನೋಡಿದಾಗ ಆಕೆಯ ಕಿವಿ ಹರಿದಿತ್ತು, ಮುಖದ ಮೇಲೆ ಕೆಂಪು ಕಲೆಗಳು ಆಗಿದ್ದವು, ಕಾಲುಗಳು ಜಜ್ಜಿದಂತೆ ಕಂಡು ಬಂದವು.

5. ಸಾಕ್ಷಿಯು ಈಗಾಗಲೇ ನಿಪಿ.7 ರಿಂದ ನಿಪಿ.10 ಎಂದು ಗುರುತಿಸಲಾಗಿರುವ ಫೋಟೋಗಳಲ್ಲಿ ಸುಧಾರವರ ಮೃತ ದೇಹ ಮತ್ತು ಆಕೆಯ ದೇಹದ ಮೇಲೆ ಆಗಿರುವ ಗಾಯಗಳು ಕಂಡು ಬರುವುದಾಗಿ ನುಡಿದಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ ಹೆಚ್ ಟಿ ಎಸ್ ಕೆ ವಕೀಲರಿಂದಃ ಆರೋಪಿ ಪರವಾಗಿಃ</u>

6. ನೀವು ಮತ್ತು ಫ್ರಾಸಾ.1 ರವರು ಸ್ನೇಹಿತರು ಎಂದರೆ ಆತ ನಮ್ಮ ಊರಿನವನು ಹಾಗಾಗಿ ಪರಿಚಯ ಎನ್ನುತ್ತಾರೆ. ಫ್ರಾಸಾ.3, ಫ್ರಾಸಾ.4, ಚಾಸಾ.5, ಚಾಸಾ.6, ಚಾಸಾ.8 ರವರು ನಿಮ್ಮ ಸಂಬಂಧಿಕರು ಎಂದರೆ ಸರಿಯಲ್ಲ ಅವರು ನಮ್ಮ ಊರಿನವರು. ಫ್ರಾಸಾ.1 ರವರು ನಿಮ್ಮ ದೂರದ ಸಂಬಂಧಿ ಎಂದರೆ ಸರಿ.

ಸುಧಾರವರು ತಮ್ಮ ಮಕ್ಕಳೊಂದಿಗೆ ಗೌರಿಕಾಲುವೆಯಲ್ಲಿ ಇದ್ದುದ್ದಾಗಿ ಹೇಳಿದ್ದೀರಿ ನೀವು ಎಷ್ಟು ಬಾರಿ ಅವರು ವಾಸವಿದ್ದ ಮನೆಗೆ ಹೋಗಿದ್ದೀರಿ ಎಂದರೆ ಸಾಕ್ಷಿ ನಾನು ಹೋಗಿಲ್ಲ ಎನ್ನುತ್ತಾರೆ. ಅವರು ಮೊದಲು ನಿಮ್ಮ ಊರಿನಲ್ಲಿ ವಾಸವಾಗಿದ್ದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಸಮಯದಲ್ಲಿ ನೀವು ಅವರ ಮನೆಗೆ ಹೋಗಿ ಬರುತ್ತಿದ್ದಿರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

7. ಸಿ ಡಿ ಎ ರವರು ನಿಮ್ಮ ಊರಿನಲ್ಲಿ ತೆಗೆದುಕೊಂಡಿರುವ ಜಾಗಕ್ಕೆ ಒಂದು ಅಡಿಗೆ ಸುಮಾರು 750 ರಿಂದ 1,000 ಬೆಲೆ ಇದೆ ಎಂದರೆ ಸರಿ. ಸುಧಾರವರ ಮನೆಯ ಯಾವುದಾದರೂ ಕಾರ್ಯಕ್ರಮಗಳಿಗೆ ಹೋಗಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸುಧಾರವರು ದಿನಸಿ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದಾಗಿ ಗೊತ್ತು ಆದರೆ ಅವರು ಹೋಗುತ್ತಿದ್ದ ಅಂಗಡಿಯ ಹೆಸರು ಮತ್ತು ವಿಳಾಸ ನನಗೆ ಗೊತ್ತಿಲ್ಲ. ಆ ವಿಚಾರವನ್ನು ಫ್ರಾಸಾ.1 ರವರು ಹೇಳಿರುವುದರಿಂದ ನಿಮಗೆ ಗೊತ್ತಿದೆ ಎಂದರೆ ಸರಿ. ಸುಧಾರವರು ದಿನಸಿ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದ ವಿಚಾರ ನೀವು ಶವಾಗಾರಕ್ಕೆ ಹೋದಾಗ ತಿಳಿದಿದೆ ಎಂದರೆ ಸಾಕ್ಷಿ ಘಟನೆಯ 2 ವರ್ಷಗಳ ಹಿಂದಿನಿಂದ ನನಗೆ ಸದರಿ ವಿಷಯ ತಿಳಿದಿತ್ತು ಎನ್ನುತ್ತಾರೆ.

8. ಆರೋಪಿಯ ಚಿಕ್ಕಪ್ಪ ಮತ್ತು ದೊಡ್ಡಪ್ಪಂದಿರು ನಿಮ್ಮ ಊರಿನಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿ. ಅವರು ನಿಮ್ಮ ದೂರದ ಸಂಬಂಧಿಕರು ಎಂದರೆ ಸರಿಯಲ್ಲ. ಸುಧಾರವರಿಗೆ ಸಂಬಂಧಿಸಿದ ಸುಮಾರು 5-6 ಎಕರೆ ಜಮೀನು ಇಂದಾವರ

ಗ್ರಾಮದಲ್ಲಿದೆ ಎಂದರೆ ಸಾಕ್ಷಿ ಜಮೀನು ಇದೆ ಎಂದು ಗೊತ್ತು ಆದರೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಇಂದಾವರ ಗ್ರಾಮದಲ್ಲಿ ಸುಧಾರವರಿಗೆ ಸೇರಿದ ಮನೆ ಇದೆ ಎಂದರೆ ಸರಿ. ಹಿಂದೆ ಸುಧಾ ರವರು ಅದೇ ಮನೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿ. ಫ್ರಾಸಾ.1 ಏನು ವಿಧ್ಯಾಭ್ಯಾಸ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ ಆತ ಡಿಗ್ರಿ ವ್ಯಾಸಂಗ ಮಾಡಿರುವುದು ಗೊತ್ತು, ನಂತರದಲ್ಲಿ ಏನು ವ್ಯಾಸಂಗ ಮಾಡಿದ್ದಾನೆ ಎಂದು ನನಗೆ ಗೊತ್ತಿಲ್ಲ. ಫ್ರಾಸಾ.1 ರವರು ಡಿಗ್ರಿ ಮುಗಿಸಿದ ನಂತರ ಇಂದಾವರದಲ್ಲಿ ಇರಲು ಆಗುವುದಿಲ್ಲ ನಾನು ಸಿಟಿಯಲ್ಲಿ ಇರಬೇಕು ಎಂದು ಹೇಳಿ ಚಿಕ್ಕಮಗಳೂರಿಗೆ ಹೋಗಲು ತನ್ನ ತಾಯಿಯೊಂದಿಗೆ ಜಗಳ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಗೊತ್ತಿರುವ ಮಟ್ಟಿಗೆ ಫ್ರಾಸಾ.1 ಸುಧಾರವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು.

9. ಆರೋಪಿ ಏನು ವ್ಯಾಸಂಗ ಮಾಡಿದ್ದಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಆತ ಸದಾ ಕಾಲ ಮನೆಯಲ್ಲಿಯೇ ಇರುತ್ತಿದ್ದನು ಎನ್ನುತ್ತಾರೆ. ಸುಧಾರವರು ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಫ್ರಾಸಾ.5 ರಾಜು ರವರು ನನಗೆ ಅಷ್ಟಾಗಿ ಪರಿಚಯವಿಲ್ಲ. ಫ್ರಾಸಾ.1 ಮತ್ತು ಸುಧಾರವರು ಆರೋಪಿಯ ಚಿಕ್ಕಪ್ಪ ಮತ್ತು ದೊಡ್ಡಪ್ಪಂದಿರನ್ನು ಸೇರಿಸಿ ಆಸ್ತಿಯಲ್ಲಿ ಅವರಿಗೆ ಬರಬೇಕಾದ ಪಾಲನ್ನು ನೀಡುವಂತೆ ಜಗಳ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಫ್ರಾಸಾ.1 ರವರು ಇಂದಾವರದಲ್ಲಿ ಅವರ ಪಾಲಿಗೆ

ಬರುವ ಜಮೀನನ್ನು ಮಾರಿ ಬೆಂಗಳೂರಿಗೆ ಹೋಗುವಂತೆ ಕೇಳಿ ಸುಧಾರವರೊಂದಿಗೆ ಪದೇ ಪದೇ ಜಗಳ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಆರೋಪಿ ಮಾನಸಿಕ ಅಸ್ವಸ್ಥನಾಗಿರುವ ಕಾರಣ ಜಮೀನನ್ನು ಮಾರಾಟ ಮಾಡುವುದು ಬೇಡವೆಂದು ಸುಧಾರವರು ಫ್ರಾಸಾ.1 ರವರನ್ನು ತಡೆಯುತ್ತಿದ್ದರು ಎಂದರೆ ಸರಿಯಲ್ಲ.

10. ಆರೋಪಿ ಸಿಗರೇಟ್ ಸೇದುತ್ತಿದ್ದುದ್ದಾಗಿ ಹೇಳಿದ್ದೀರಿ ನೀವು ಅದನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎನ್ನುತ್ತಾರೆ. ಆ ವಿಚಾರವನ್ನು ನೀವು ಸುಧಾರವರಿಗೆ ತಿಳಿಸಿದ್ದೀರೇ ಎಂದರೆ ಸಾಕ್ಷಿ ತಿಳಿಸಿದ್ದೇನೆ ಮತ್ತು ಅದು ಅವರಿಗೂ ಗೊತ್ತಿತ್ತು ಎನ್ನುತ್ತಾರೆ. ಆರೋಪಿಯನ್ನು ಕೊನೆಯ ಬಾರಿಗೆ ಎಲ್ಲಿ ನೋಡಿದ್ದೀರಿ ಎಂದರೆ ಸಾಕ್ಷಿ ಪೊಲೀಸ್ ಠಾಣೆಯಲ್ಲಿ ನೋಡಿದ್ದೇನೆ ಎನ್ನುತ್ತಾರೆ. ಅದರ ಹಿಂದೆ ನೀವು ಆತನನ್ನು ಯಾವಾಗ ನೋಡಿದ್ದೀರಿ ಎಂದರೆ ಸಾಕ್ಷಿ ಊರಿನ ದೇವಸ್ಥಾನದ ಕಾರ್ಯಕ್ರಮದಲ್ಲಿ ನೋಡಿದ್ದೆನು ಎನ್ನುತ್ತಾರೆ. ಫ್ರಾಸಾ.1 ರವರು ಪ್ರಸ್ತುತ ಯಾವ ಕಂಪೆನಿಯಲ್ಲಿ ಯಾವ ಹುದ್ದೆಯಲ್ಲಿ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಫ್ರಾಸಾ.1 ರವರನ್ನು ನಾನು ಕೊನೆಯ ಬಾರಿಗೆ ಸುಧಾರವರ ತಿಂಗಳ ಕಾರ್ಯದಲ್ಲಿ ಭೇಟಿಯಾಗಿದ್ದೆನು ಅದಾದ ನಂತರದಲ್ಲಿ ನಾನು ಆತನನ್ನು ಭೇಟಿಯಾಗಿಲ್ಲ.

11. ಆರೋಪಿ ಯಾವುದೇ ಕೆಲಸವನ್ನು ಮಾಡುವುದಿಲ್ಲವೆಂದು ಮತ್ತು ಆತನನ್ನು ಯಾವುದಾದರೂ ಕೆಲಸಕ್ಕೆ ಸೇರಿಸು ಎಂದು ಸುಧಾರವರೇ ನನಗೆ ಹೇಳಿದ್ದರು. ಆರೋಪಿಯನ್ನು ಸುಧಾರವರು 2-3 ಕಡೆ ಕೆಲಸಕ್ಕೆ ಸೇರಿಸಿದ್ದರು ಆದರೆ ಆತ ಕೆಲಸ

ಮಾಡದೇ ಬಿಟ್ಟು ಬಂದಿದ್ದನು. ಸುಧಾರವರು ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದು ನಿಮ್ಮ ಬಳಿ ಯಾವತ್ತಾದರೂ ಹೇಳಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

12. 23 ನೇ ತಾರೀಖಿನಂದು ನಾನು ಮತ್ತು ಸಂದೀಪ್ ಚಿಕ್ಕಮಗಳೂರಿನ ಆಸ್ಪತ್ರೆಗೆ ಹೋಗಿದ್ದೆವು ಆದರೆ ಆ ದಿನ ನಮ್ಮನ್ನು ಒಳಗೆ ಬಿಟ್ಟಿರಲಿಲ್ಲ. ನೀವು ಚಿಕ್ಕಮಗಳೂರು ಆಸ್ಪತ್ರೆಯ ಶವಾಗಾರಕ್ಕೆ ಹೋಗಿದ್ದಾಗಿ, ಅಲ್ಲಿ ಫ್ರಾಸಾ.1 ರವರು ಆರೋಪಿ ಸುಧಾರವರನ್ನು ಕೊಲೆ ಮಾಡಿದ್ದಾಗಿ ನಿಮಗೆ ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

13. ದಿನಾಂಕ 23.09.2021 ರಂದು ಆರೋಪಿ, ಸುಧಾ ಮತ್ತು ಫ್ರಾಸಾ.1 ರವರು ದೇವಸ್ಥಾನಕ್ಕೆ ಹೋಗಿ ಬಂದಿದ್ದಾಗಿ ಫ್ರಾಸಾ.1 ರವರು ನಿಮಗೆ ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಸುಧಾರವರ ಶವವನ್ನು ನೋಡಲು ಹೋಗಿದ್ದಾಗ ಪೊಲೀಸರು ನನ್ನನ್ನು ವಿಚಾರಿಸಿದ್ದನ್ನು ಹೊರತುಪಡಿಸಿ ಬೇರೆ ದಿನದಂದು ಅವರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಫ್ರಾಸಾ.1 ರವರು ವಾಪಾಸ್ಸು ಮನೆಗೆ ಬಂದು ನೋಡಿದಾಗ ಆರೋಪಿ ಸುಧಾರವರನ್ನು ಕೊಲೆ ಮಾಡಿದ್ದಾಗಿ ಅವರು ನಿಮಗೆ ತಿಳಿಸಿರುವುದು ಸುಳ್ಳು ಎಂದರೆ ಸರಿಯಲ್ಲ.

14. ಆರೋಪಿ ಮಾನಸಿಕ ಅಸ್ವಸ್ಥನಾಗಿರುವ ಕಾರಣ ಮತ್ತು ಆತನಿಗೆ ಆಸ್ತಿಯಲ್ಲಿ ಪಾಲು ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಫ್ರಾಸಾ.1 ರವರು ಆರೋಪಿಯೇ ಸುಧಾರವರನ್ನು

ಕೊಲೆ ಮಾಡಿದ್ದಾರೆ ಎಂದು ಸುಳ್ಳು ಹೇಳಿದ್ದಾನೆ ಎಂದರೆ ಸರಿಯಲ್ಲ.

15. ಸಿಗರೇಟ್ ಸೇದಲು ಹಣವನ್ನು ಕೊಡದ ಕಾರಣ ತಾನೇ ಸುಧಾರವರನ್ನು ಕೊಲೆ ಮಾಡಿದ್ದಾಗಿ ಆರೋಪಿ ಪ್ರಾಸಾ.1 ರವರಿಗೆ ತಿಳಿಸಿದ್ದಾಗಿ ಅವರು ನಿಮಗೆ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರಾಸಾ.1 ರವರೇ ಸುಧಾರವರನ್ನು ಕೊಲೆ ಮಾಡಿ ಆ ಆರೋಪವನ್ನು ಆರೋಪಿಯ ಮೇಲೆ ಹೊರಿಸಿದ್ದಾರೆ ಎಂದರೆ ಸರಿಯಲ್ಲ.

16. ಘಟನೆ ನಡೆದ ಸಮಯದಲ್ಲಿ ಆರೋಪಿ ಮನೆಯಲ್ಲಿ ಇರದೇ ಇದ್ದರೂ ಸಹ ಆತ ಮಾನಸಿಕ ಅಸ್ವಸ್ಥನಾಗಿರುವ ಕಾರಣ ಮತ್ತು ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಪ್ರಾಸಾ.1 ರವರು ನಿಮಗೆ ಸುಳ್ಳು ಮಾಹಿತಿಯನ್ನು ಕೊಟ್ಟು ನಿಮ್ಮಿಂದ ಸುಳ್ಳು ಸಾಕ್ಷ್ಯವನ್ನು ಹೇಳಿಸಿದ್ದಾರೆ ಎಂದರೆ ಸರಿಯಲ್ಲ. ಪ್ರಾಸಾ.1 ರವರು ನಿಮ್ಮ ಸ್ನೇಹಿತನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ